<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>

<u>Spl.C.131/2023</u>

ದಿಃ 05.01.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-5 Pw-3

| | | |
|---|---|---|
| ಹೆಸರು | ಃ | ಸಂಪತ್ ಕುಮಾರ್ |
| ತಂದೆಯ ಹೆಸರು | ಃ | ಬಸವೇಗೌಡ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಆಟೋ ಚಾಲಕ |
| ವಾಸಸ್ಥಳ | ಃ | ಮತ್ತಿಕೆರೆ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ದಿಃ 07.07.2023ರಂದು ಬೆಃ 10.30ರಿಂದ 11.30ರವರೆಗೆ ಚಾಸಾಃ1 ಇವಳ ತೋರಿಕೆಯ ಮೇರೆಗೆ ಗಲಾಟೆ ಮಾಡಿದ ಘಟನಾ ಸ್ಥಳವೆಂದು ತನ್ನ ಮನೆಯನ್ನು ತೋರಿಸಿದ ಪ್ರಕಾರ ಪೊಲೀಸರು ನಮ್ಮ ಸಮಕ್ಷಮದಲ್ಲಿ ಭೇಟಿ ನೀಡಿ ಒಂದು ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ನಮ್ಮ ಸಹಿಯನ್ನು ಪಡೆದಿರುತ್ತಾರೆ.

2. ಸದರಿ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿಃ2 ಎದು ಅದರ ಮೇಲಿರುವ ನನ್ನ ಸಹಿಯನ್ನು ನಿಪಿಃ2ಎ ಎಂದು ಗುರುತಿಸಲಾಯಿತು.

3. ಅದೇ ಸಮಯದಲ್ಲಿ ನಿಪಿಃ2 ಕ್ಕೆ ಸಂಬಂಧಿಸಿದಂತೆಯೇ ಪೊಲೀಸರು ಎರಡು ವರ್ಣ ರಂಜಿತ ಛಾಯಾಚಿತ್ರಗಳನ್ನು ತೆಗಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಕ್ರಮವಾಗಿ ನಿಪಿಃ3 ಮತ್ತು 4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ. ಡಿ ಎನ್ ಎಚ್, ವಕೀಲರಿಂದ ಆರೋಪಿಗಳ ಪರವಾಗಿಃ ಆರೋಪಿ ಪರ ವಕೀಲರು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಯಾವುದೇ ಸಕಾರಣವಿಲ್ಲದ್ದರಿಂದ ಮತ್ತು ವಿನೋದ್ ಕುಮಾರ್ ವರ್ಸಸ್ ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯ ವಿಚಾರಣೆ ಮತ್ತು ಪಾಟೀ ಸವಾಲುಗಳನ್ನು ಒಂದೇ ದಿನದಂದು ಮಾಡಬೇಕೆಂದು ನಿರ್ದೇಶನವಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.